


# ಕನ್ನಡದಲ್ಲಿ eBook ಬರೆಯಿರಿ

ಕನ್ನಡದಲ್ಲಿ Ebook ಬರೆಯಿರಿ

nagesh writes...

# ಪರಿವಿಡಿ


i. ಪರಿಚಯ


೧. ಮೊದಲು ಬರೆಯುವ ಬಗ್ಗೆ

೨. ಎಲ್ಲಿ ಪ್ರಕಟಿಸಲಿ?

೩ ಫೈಲ್ ಬಗೆಗಳು ಮತ್ತು ವಿವರಣೆ

೪. ಯಾವ ವೆಬ್ ತಾಣಗಳು?

೫. ಹೇಗೆ ಇ-ಪುಸ್ತಕ ಓದಲಿ?

**ಇ-ಪುಸ್ತಕ ಲೋಕದಲ್ಲಿ ಕನ್ನಡ ದಾಪುಗಾಲು!**

**.....ಡಿಜಿಟಲ್ ಆವೃತ್ತಿ ಓದು-ಬರಹದ ಮುನ್ನಡೆ...**

ಇಂದಿನ ಮೊಬೈಲ್ ಯುಗದಲ್ಲಿ ಎಲ್ಲಾ ಭಾಷೆಗಳಲ್ಲಿ - ಇ ಪುಸ್ತಕಗಳ ಜನಪ್ರಿಯತೆ ಹೆಚ್ಚುತ್ತಿದ್ದು ಅಂತರ್ಜಾಲ ಮಾರುಕಟ್ಟೆಯಲ್ಲಿ ಅವುಗಳ ಲಭ್ಯತೆಯೂ ಹೆಚ್ಚಾಗಿದೆ. ಮುಂಚಿನಿಂದ ಮುದ್ರಿತ ( ಹಾರ್ಡ್ ಕಾಪಿ) ಪುಸ್ತಕಗಳು, ಪತ್ರಿಕೆಗಳು ನಮಗೆ ಪರಿಚಿತವಾದರೂ, ಪ್ರಿಯವಾದರೂ ಅವನ್ನು ಕೊಳ್ಳಲು ಅಂಗಡಿಗಳಿಗೆ ಹೋಗಿ ವಿಚಾರಿಸಿಯೇ ಕೊಳ್ಳಬೇಕಿತ್ತು. ಈಗಿನ ಕಾಲದಲ್ಲಿ ಈ ಚಟುವಟಿಕೆಗೆಗೆಂದೇ ಪ್ರತ್ಯೇಕವಾದ ಸಮಯ ಮತ್ತು ಅವಕಾಶದ ಅಭಾವ ಮುಂತಾದ ಹಲವು ನಿರ್ಬಂಧಗಳು ನಮ್ಮನ್ನು ಕಾಡುತ್ತವೆ. ಅದರಲ್ಲೂ ಎಲ್ಲ ಲೇಖಕರ ಅಥವಾ ಎಲ್ಲ ವಿಷಯಗಳ ಕನ್ನಡ ಪುಸ್ತಕಗಳ ಲಭ್ಯತೆ ಎಲ್ಲಾ ಅಂಗಡಿಗಳಲ್ಲೂ ಇರುವುದಿಲ್ಲ ಅಥವಾ ಎಲ್ಲ ಊರುಗಳಲ್ಲಿಯೂ ದೊರಕುವುದೂ ಇಲ್ಲ.

ಇನ್ನು ಕೊಂಡ ನಮ್ಮ ಪುಸ್ತಕಗಳನ್ನು ಕಳೆದುಹೋಗದಂತೆ, ಹಾಳಾಗದಂತೆ ಜೋಪಾನ ಮಾಡುವುದು ಮತ್ತು ಸ್ಥಳದಿಂದ ಸ್ಥಳಕ್ಕೆ ಮರೆಯದೇ ತೆಗೆದುಕೊಂಡು ಹೋಗುವುದು ಎಲ್ಲವೂ ಪ್ರತ್ಯೇಕ ಸಮಸ್ಯೆಯೇ ಆಗಿದೆ. (ನಮ್ಮಿಂದ ಪುಸ್ತಕವನ್ನು ಎರವಲು ಪಡೆದವರು ವಾಪಸ್ ಕೊಡದಿದ್ದರೆ ಎಂಬ ಆತಂಕವೂ ಸೇರಿದೆ!)..

ಇಂತಾ ಸನ್ನಿವೇಶದಲ್ಲಿ ಕಲ್ಪಿಸಿಕೊಳ್ಳಿ: ಒಮ್ಮೆ ಕೊಂಡ ಪುಸ್ತಕ ಸದಾ ನಮ್ಮ ಬಳಿ ಹಾಳಾಗದ ಸ್ಥಿತಿಯಲ್ಲಿ ನಮ್ಮ ಇಂದಿನ ಪ್ರಿಯ ಸಂಗಾತಿ ಮೊಬೈಲ್/ ಟ್ಯಾಬ್ಲೆಟ್ ಒಳಗೇ ಇರಬಹುದಾದರೆ..?

ಹಾಗಾಗಿ ಈಗೀಗ ಜನಪ್ರಿಯಗೊಳ್ಳುತ್ತಿರುವ ಸೌಲಭ್ಯವೇ ಈ e- books (ಇ- ಪುಸ್ತಕಗಳು)! ಅಥವಾ ವಿದ್ಯುನ್ಮಾನ ಆವೃತ್ತಿಯ ಡಿಜಿಟಲ್ ಪುಸ್ತಕಗಳು.

ಇದಕ್ಕೆ ಪೂರಕವಾಗಿ ಜನಪ್ರಿಯಗೊಳ್ಳುತ್ತಿರುವ ಸೌಕರ್ಯವೆಂದರೆ ಕಂಪ್ಯೂಟರು ಮತ್ತು ಮೊಬೈಲುಗಳಲ್ಲಿ ಇತ್ತೀಚೆಗೆ ಹೆಚ್ಚಿದ ಗಣಕ ಯಂತ್ರ-ಸ್ನೇಹಿ ಕನ್ನಡ ಲಿಪಿಯ ಬಳಕೆ..

ಮೊದಮೊದಲು ಅಂದರೆ ಐದು ವರ್ಷಗಳ ಹಿಂದಿನವರೆಗೂ ಕನ್ನಡ ಅಕ್ಷರಗಳು ಹಲವು OS ವ್ಯವಸ್ಥೆಯಲ್ಲಿ ದೊರೆಯುತ್ತಿದ್ದ ಮೊಬೈಲ್ ಸಾಧನಗಳಲ್ಲಿ ಸ್ಪಷ್ಟವಾಗಿ ಮೂಡುವ ಬಗ್ಗೆ ಸಾಕಷ್ಟು ಗೊಂದಲವಿತ್ತು. ಕೆಲವು ಯಂತ್ರಗಳಲ್ಲಿ ಮೂಡಿದರೆ ಮಿಕ್ಕವು ಕನ್ನಡ ಮುಂತಾದ ಭಾರತೀಯ ಭಾಷೆಗಳ ಲಿಪಿಯನ್ನು ಬೆಂಬಲಿಸುತ್ತಿರಲಿಲ್ಲ . ಹಲವು ಆವಿಷ್ಕಾರ ಮತ್ತು ಅಭಿವೃದ್ಧಿಗಳ ನಂತರ

ವಿಶ್ವಾದ್ಯಂತ ಗಣಕಯಂತ್ರಗಳಲ್ಲಿ ಜಾರಿಗೆ ಬಂದ ಯೂನಿಕೋಡ್(UNICODE) ತಂತ್ರಾಂಶ ಎಲ್ಲರಿಗೂ ಹೊಸ ಬರವಣಿಗೆಯ ಲೋಕವನ್ನೇ ತೆರೆದಿಟ್ಟಿತು. ಹೆಚ್ಚಿದ ಕನ್ನಡ ಜಾಲತಾಣದಲ್ಲಿ ಕನ್ನಡ ಬಳಕೆ ಹೆಚ್ಚುತ್ತಿದ್ದಂತೆಯೇ, ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್, ಟ್ವಿಟರ್, SMS ಮುಂತಾದ ಸಂದೇಶವಾಹಿನಿಗಳೂ ಈ ಕ್ರಾಂತಿಯನ್ನು ಇನ್ನೂ ಪ್ರವರ್ಧಮಾನಕ್ಕೆ ತರುವಲ್ಲಿ ಯಶಸ್ವಿಯಾದವು. ಮನೆಮನೆಯಲ್ಲಿ ಮೊಬೈಲ್ ಮತ್ತು ಲ್ಯಾಪ್ ಟಾಪ್ ಲಭ್ಯತೆಯೂ ಇದಕ್ಕೆ ಪ್ರಮುಖ ಕಾರಣವಾಯಿತು.

ಈಗ ಸರಿಸುಮಾರು ಎಲ್ಲಾ ಆ್ಯಂಡ್ರಾಯ್ಡ್ ಮೊಬೈಲ್/ iOS ( ಆಪಲ್) ವಿಂಡೋಸ್ ಮೊಬೈಲ್ ಮತ್ತು ಗಣಕ ಯಂತ್ರಗಳಲ್ಲಿ ಯಾವ ತೊಂದರೆಯೂ ಇಲ್ಲದೇ ಕನ್ನಡ ಓದಬಹುದಾಗಿದೆ, ಬರೆಯಬಹುದಾಗಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಒಂದು ಹೆಜ್ಜೆ ಎಲ್ಲರಿಗಿಂತಲೂ ಮುಂದೆಯೇ ಇದ್ದ ಐ ಟಿ ಕ್ರಾಂತಿಯ ಹರಿಕಾರರಾದ ಕನ್ನಡಿಗರು, ಈಗೀಗ ಈ ಸೌಲಭ್ಯದ ಪೂರ್ಣ ಲಾಭ ತೆಗೆದುಕೊಳ್ಳಲಾರಂಭಿಸಿದ್ದಾರೆ.

## 1. ಕನ್ನಡ ಬರೆಯುವ ಬಗ್ಗೆ:

ಮೊತ್ತ ಮೊದಲು ನಾವು ಕನ್ನಡ ಯೂನಿಕೋಡ್ ಕನ್ನಡ ಲಿಪಿಯ ಹಿನ್ನೆಲೆ ಬಗ್ಗೆ ಸ್ವಲ್ಪ ತಿಳಿದಿರಬೇಕು.:

ಇಂಗ್ಲೀಷ್ ಕೀ ಬೋರ್ಡ್/ ಕೀಲಿಮಣೆ ಉಪಯೋಗಿಸಿ ಕನ್ನಡವನ್ನು ನೇರವಾಗಿ ಟೈಪಿಸುವ ತಂತ್ರವಿದು. ಇದಕ್ಕೆಫೋನೆಟಿಕ್ ಅಥವಾ transliteration ಕೀಲಿಮನೆ ವ್ಯವಸ್ಥೆ ಎನ್ನುತ್ತಾರೆ. ನಾವು ಹೀಗೆ ಆಂಗ್ಲ ಅಕ್ಷರಗಳಲ್ಲೇ ಟೈಪ್ ಮಾಡುತ್ತಾ ಹೋದಾಗ ಅವು ಪರದೆಗಳಲ್ಲಿ ಕನ್ನಡದಲ್ಲಿ ಮೂಡುತ್ತಾ ಹೋಗಲು ಕೆಲವು ಉಪ ತಂತ್ರಾಂಶ  ಸಾಫ್ಟ್ ವೇರ್ ಬೇಕಾಗುತ್ತದೆ.

ಕೆಲವು ಉಪಯುಕ್ತ ಕೊಂಡಿಗಳು ಹೀಗಿವೆ:

೧. Typekannada, Google input tools, pada, baraha ಹೀಗೆ ಹಲವು ಸಾಧನಗಳು ವಿಂಡೋಸ್ ವ್ಯವಸ್ಥೆಗೂ, justkannada ಮುಂತಾದ ಆ್ಯಪ್‌ಗಳು andriod ಮೊಬೈಲ್ ಫೊನುಗಳಿಗೂ ಲಭ್ಯವಿದೆ.

೨. **ಕೆ.ಪಿ.ರಾವ್ ಅಥವಾ ಕನ್ನಡ ಗಣಕ ಪರಿಷತ್ತು (ಕಗಪ) ಅಥವಾ ನುಡಿ ಕೀಲಿಮಣೆ** :  ಇದು ಕರ್ನಾಟಕ ಸರ್ಕಾರದ ಅಧಿಕೃತ ಕೀಲಿಮಣೆ ವಿನ್ಯಾಸ. ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ: www.baraha.com/help/Keyboards/kan_brhkbd.htm

ಮುಂಚೆ ASCII ಎಂಬ glyph ಆಧರಿತ ಪದ್ಧತಿಯ ಪ್ರಕಾರ **ನುಡಿ/ ಬರಹ** - ಮುಂತಾದ ಕನ್ನಡ ತಂತ್ರಾಂಶಗಳ ಮೂಲಕವೇ ಟಂಕಿಸಬೇಕಾಗಿತ್ತು. ಈಗ ಅವು ಪುಸ್ತಕ ಪ್ರಕಾಶಕ ವ್ಯವಸ್ಥಾಪಕರಿಗೆ ಮಾತ್ರವೇ ಬೇಕಾಗುತ್ತದೆ...ಅಕಸ್ಮಾತ್ ನೀವು **ನುಡಿ/ ಬರಹ** ದಲ್ಲಿ ಬರೆದರೂ ಅವನ್ನು ಸುಲಭವಾಗಿ ಯೂನಿಕೋಡಿಗೆ, ಅಥವಾ ಯೂನಿಕೋಡಿನಿಂದ ನುಡಿಗೆ ಪರಿವರ್ತಿಸಿ ಜಾಲತಾಣಗಳಲ್ಲಿ ಬಳಸಿಕೊಳ್ಳಲು ಕೆಲವು ಆನ್ಲೈನ್ ಸಾಧನಗಳಿವೆ: baraha convert,

ಮತ್ತು http://aravindavk.in/ascii2unicode/ ಇತ್ತಿರುವ ಉಚಿತ ಸಾಧನ ಇತ್ಯಾದಿ.

ಆ್ಯಪಲ್ ( ಐ ಫೋನ್, ಐ ಪ್ಯಾಡ್)/ ಲಿನಕ್ಸ್/ ಮ್ಯಾಕ್ ಪದ್ಧತಿಯಲ್ಲಿ ಅದರ ಬಳಕೆದಾರರಿಗೆ ಕನ್ನಡಕ್ಕಾಗಿ ತನ್ನದೇ ಆದ kannada keypad ಕೂಡಾ iTunes store ನಲ್ಲಿ ಉಚಿತವಾಗಿ ಲಭ್ಯವಿದೆ.

## 2. ಕನ್ನಡದ ಇ-ಪುಸ್ತಕ ಪ್ರಕಾಶಿಸುವುದು ಹೇಗೆ?

**ಕನ್ನಡದಲ್ಲಿ ಹೆಚ್ಚುತ್ತಿರುವ ಮೊಬೈಲ್ ಮತ್ತು ಗಣಕ ಯಂತ್ರ ಬಳಸುವ ಬರಹಗಾರರು ತಮ್ಮ ಸಾಧನವನ್ನೇ ನೆಚ್ಚಿಕೊಂಡಿರುವುದರಿಂದ ಇ-ಪುಸ್ತಕಗಳನ್ನೂ ಸುಲಭವಾಗಿ ಪ್ರಕಟಿಸುವುದು ಒಂದೆಡೆಯಾದರೆ, ಇನ್ನೊಂದೆಡೆ ಓದುಗರು ಇವನ್ನು ಕೊಳ್ಳಲು ಇಲ್ಲವೆ ಬಾಡಿಗೆ ಪಡೆಯಲೂ ಕೂಡಾ ಅವಕಾಶಗಳು ದೊರೆಯಲಾರಂಭಿಸಿವೆ**

ಕನ್ನಡದಲ್ಲಿ ವಿಂಡೋಸ್/ ಆಂಡ್ರಾಯ್ಡ್ ನಲ್ಲಿ ಬರೆದ ಪಠ್ಯವನ್ನು RTF/ WORD Doc/ DOCX ಫೈಲ್ ಆಗಿ ಸೇವ್ ಮಾಡಿಕೊಂಡರೆ ಪ್ರಕಟಿಸಲು ಸುಲಭ..

ಆನ್ಲೈನಿನಲ್ಲಿ ಕನ್ನಡ ಇ ಪುಸ್ತಕ ಪ್ರಕಾಶನ ಬಹಳ ಸುಲಭ ಮತ್ತು USER FRIENDLY ಆಗಿದೆ. ಇವುಗಳಲ್ಲಿ ಅಧಿಕ ಜನಪ್ರಿಯತೆಯನ್ನು ಹೊಂದಿದ (Pothi.com) Smashwords.com, kobo.com, lulu.com ಅತ್ಯಂತ ಸುಲಭ ಮಾರ್ಗವನ್ನು ಆನ್ಲೈನ್ ನಲ್ಲಿ ಎಲ್ಲರಿಗೂ ಲಾಗ್-ಇನ್ ಮಾಡಿದ ಕೂಡಲೇ ಉಚಿತವಾಗಿ, ಒಂದು ಅರ್ಜಿ ತುಂಬಿಸುವಷ್ಟು ಸಲೀಸಾಗಿ ನೀಡುತ್ತವೆ. ಯಾವುದೇ ಶುಲ್ಕವಿಲ್ಲದೇ ಇಲ್ಲಿ ಓದುಗರು ಪುಸ್ತಕವನ್ನು (ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಮೆರಿಕನ್ ಡಾಲರ್/ ಪೌಂಡ್ ಇತ್ಯಾದಿ ಕರೆನ್ಸಿಯಲ್ಲಿ ಬೆಲೆ ನಮೂದಿಸಿದ್ದರೂ) ಸುಲಭವಾಗಿ ಕ್ರೆಡಿಟ್ ಕಾರ್ಡ್/ ನೆಟ್ ಬ್ಯಾಂಕಿಂಗ್ ಮೂಲಕ ಖರೀದಿಸಬಹುದು. ನಾವು ನಮ್ಮ ಭಾರತೀಯ ಕಾರ್ಡ್/ ಅಕೌಂಟ್ ಬಳಸಿದರೂ ತೊಂದರೆಯಿಲ್ಲ, ಸಮಾನ ಮೊತ್ತಕ್ಕೆ ಸ್ವಯಂ ಬದಲಾವಣೆಯಾಗುತ್ತವೆ

ಮಿಕ್ಕ ಕೆಲವು ಭಾರತೀಯ ಸೈಟುಗಳು ಲೇಖಕರ ಜತೆ ಒಪ್ಪಂದ (agreement )ಮಾಡಿಕೊಳ್ಳಬಯಸುತ್ತವೆ. ಉದಾ. dailuhunt.in, pustaka.co.in,kaiboooks ಮತ್ತು vividlipi ಮುಂತಾದ ಭಾರತೀಯ ವೆಬ್ ತಾಣಗಳು. ಹಾಗೆ ಲೇಖಕರು ಒಪ್ಪಂದ ಮಾಡಿಕೊಳ್ಳುವ ವ್ಯವಸ್ಥೆಯೂ ನೇರ ಹಾಗೂ ಸುಲಭ. ಆಯಾ ವೆಬ್ ಸೈಟಿನಲ್ಲಿ ಸಂಪರ್ಕ ಇ-ಮೈಲಿಗೆ ಒಮ್ಮೆ ನಾವು ಬರೆದರೆ ಸಾಕು. ಮಿಕ್ಕ ಕೆಲಸ ಸುಲಭ. ಇಲ್ಲಿ ಲೇಖಕರು ತಮ್ಮ ಹಕ್ಕನ್ನು ಅವರಿಗೆ ಒಪ್ಪಿಸಬೇಕಾಗಿಲ್ಲ, ಮಿಕ್ಕ ಕಡೆಯೂ ತಮ್ಮ ಕೃತಿಗಳನ್ನು ಪ್ರಕಟಿಸಲು ಅವರು ಸ್ವತಂತ್ರರು. ಇಲ್ಲಿ ಕೊಳ್ಳುಗ ಓದುಗರೂ ನಿಮ್ಮ ಪುಸ್ತಕಗಳನ್ನು ಭಾರತೀಯ ರೂ. ಗಳಲ್ಲೆ ಕೊಳ್ಳಬಹುದು.

ಮುಕ್ಕಾಲುಪಾಲು ಆನ್ ಲೈನ್ ಪುಸ್ತಕಗಳು ಈಗ EPUB ಎಂಬ ಫೈಲ್ ಬಗೆಯಲ್ಲಿ ಪ್ರಕಟವಾಗುತ್ತದೆ. ಅದು ಕನ್ನಡ ಲಿಪಿಯನ್ನು ಯಾವ ಒತ್ತಕ್ಷರದ ಸಮಸ್ಯೆಯೂ ಇಲ್ಲದಂತೆ ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಉದಾಹರಣೆಗೆ ಜತೆಗೆ ಒಂದು ಚಿತ್ರ ನೀಡಿದ್ದೇನೆ ( ಸುಧಾದಲ್ಲಿ ಪ್ರಕಟವಾದ 'ಮುಳುಗುವ ಕೊಳ' ಧಾರಾವಾಹಿಯ ಪ್ರತಿ). ನಮ್ಮ ಮೂಲ word doc ಅನ್ನು EPUB ಆಗಿ ಬದಲಿಸಲು ಆಯಾ ಪುಸ್ತಕ ವೆಬ್ ಸೈಟುಗಳೇ ಸಹಾಯ ಮಾಡುತ್ತವೆ.
ನಾವು ಅವರ ( smashwords. lulu, kobo websites) "ಪಬ್ಲಿಶ್ ಯುವರ್ ಬುಕ್" ಅಥವಾ “ಅಪ್ಲೋಡ್ “ ಎಂಬ ವಿವರವಿರುವ ಕೊಂಡಿಗೆ ಹೊದರೆ ಸಾಕು. ಅವರೇ ಹೆಸರು, ಶೀರ್ಷಿಕೆ , ಅದರ ಕವರ್, ಮತ್ತು ಫೈಲನ್ನು ಆನ್ಲೈನ್ ಅರ್ಜಿಯ ಮೂಲಕ ಕೇಳುತ್ತಾರೆ..
ಅವರು ನಿಮ್ಮ ಕತೆ/ ಲೇಖನದ ವರ್ಡ್ ಡಾಕ್ಯುಮೆಂಟಿನಲ್ಲಿ ಕೆಲವು ನಿಯಮಗಳನ್ನು ಪಾಲಿಸಲು ಕೇಳುತ್ತಾರೆ:
೧. ಅದರಲ್ಲಿ TABLE OF CONTENTS ( ಪರಿವಿಡಿ) ಇರಲೇಬೇಕು. ಇದನ್ನು ನಾವು WORD ನಲ್ಲಿ ಮೆನು ನಲ್ಲಿ REFERENCES> TABLE OF CONTENTS ಗೆ ಹೋಗಿ ನಿಮ್ಮ ಪುಸ್ತಕದ ಅಧ್ಯಾಯಗಳ ಹೆಸರು ಮತ್ತು ಪುಟ ಸಂಖ್ಯೆ ಸೂಚಿಸಬೇಕು
ಇವೆಲ್ಲಾ ಬಹಳ ಸುಲಭವೂ ಹೌದು. ಒಂದೆರಡು ಪ್ರಯತ್ನಗಳಲ್ಲಿ ಸಫಲರಾಗಬಹುದು. ಆಗ ನಿಮ್ಮ ಓದುಗರು ಅಧ್ಯಾಯದಿಂದ ಅಧ್ಯಾಯಕ್ಕೆ ಇಚ್ಚಾನುಸಾರ ಜಿಗಿಯಲು ಸಾಧ್ಯ!
೨. ISBN: = International Standard Book Number.-ಎಂಬ ಅಂತರರಾಷ್ಟ್ರೀಯ ಮಾರಾಟ ನಿಯಮದ ಅಂಕೆಯನ್ನು ಉಚಿತವಾಗಿ ಪಡೆದು ನಿಮ್ಮ ಪುಸ್ತಕಕ್ಕೆ ಕೆಲವು ತಾಣಗಳಲ್ಲಿ ಕೇಳಿದಾಗ ನಮೂದಿಸಬೇಕು. ಇದನ್ನು ಮಾರಾಟದ ಬೆಲೆಗಾಗಿ ಬಾರ್ ಕೋಡ್ ಬಳಕೆಗಾಗಿ ಇ ಪುಸ್ತಕದ ಬೆನ್ನಿನಲ್ಲಿ ಮುದ್ರಿಸುತ್ತಾರೆ. ಕೆಲವು ಇ-ಪುಸ್ತಕ ಪ್ರಕಾಶಕರು ನಿಮಗೆ ಉಚಿತ ನಂಬರ್ ಬೇಕು ಎಂದು

ಕೋರಿದರೆ ಅವರೇ ಅರ್ಜಿಯಲ್ಲೇ ಕೊಡುತ್ತಾರೆ..

೩.ಪುಸ್ತಕದ ಎರಡನೇ/ ಮೂರನೇ ಪುಟದಲ್ಲಿ ನಿಮ್ಮ ಕಾಪಿ ರೈಟ್ ಮತ್ತು Disclaimer ಇರಲೇಬೇಕು. ಇದು ಸದರಿ ಪುಸ್ತಕಕ್ಕೆ ನೀವೇ ಕಾಪಿ ರೈಟ್ ಉಳ್ಳವರೆಂದು ನಿಮ್ಮ ಹಕ್ಕು-ಭಾದ್ಯತೆಗಳನ್ನು ಸೂಚಿಸುತ್ತದೆ.

೪. ನಿಮ್ಮ ಪುಸ್ತಕವು ಅನುವಾದ ಇಲ್ಲವೆ ಅಧರಿತವಾಗಿದ್ದಲ್ಲಿ ಅದನ್ನು ಪ್ರಕಟಿಸಲು ಇದೇ ಸೂಕ್ತ ಸ್ಥಳ .

೫. ಮುಖಪುಟ/ ಕವರ್ ಚಿತ್ರ:

ನಮ್ಮಿಚ್ಚೆಯಂತಾ ಮುಖಪುಟ ವಿನ್ಯಾಸವನ್ನು ವನ್ನು ಪ್ರಕಾಶಕರ ಲೈಬ್ರರಿಯಲ್ಲಿಯೇ ಆರಿಸಿಕೊಳ್ಳಬಹುದು, ಇಲ್ಲವೆ ನೀವೇ ನಿಮ್ಮ ಇಷ್ಟದ ಚಿತ್ರವನ್ನೂ ಅಪ್-ಲೋಡ್ ಮಾಡಬಹುದು ನಾನು ಹೇಳಿದ ಮೂರು ವಿದೇಶಿ ವೆಬ್ಸೈಟುಗಳೂ, ಭಾರತೀಯ ಸೈಟುಗಳೂ ಕೆಲವು ನಿಯಮವನ್ನು ಉಪಯೋಗಿಸುತ್ತಾರೆ. ನಿಮ್ಮ ಕವರ್ ಚಿತ್ರ Rectangle ಇದ್ದು ೧೪೦೦ ಪಿಕ್ಸೆಲ್ ಅಗಲ ಮತ್ತು ಅದಕ್ಕಿಂತಾ ಹೆಚ್ಚು ಆಳ ( ೧೮೦೦) ಇರಬೇಕೆನ್ನುತ್ತಾರೆ. ಇದನ್ನು ನೀವೇ MS Paint ಇತ್ಯಾದಿಯಲ್ಲಿ JPEG/PNG ಕಡತ ಮಾದರಿಯಲ್ಲಿ ತಯಾರಿಸಬಹುದು

೬. ಮೂಲ ಕತೆ ಮತ್ತು ಕವರ್ ಅಪ್ ಲೋಡ್ ಮಾಡಿದ ಮೇಲೆ ಪುಸ್ತಕದ ಬೆಲೆ ಪುಟಕ್ಕೆ ಹೋಗಿ ನಿಮಗೆ ಬೇಕಾದ ಬೆಲೆ ಸೂಚಿಸಬಹುದು .ಡಾಲರ್ ನಲ್ಲಿ ( 0.99/1.99/2.99 ಇತ್ಯಾದಿ) ಬೆಲೆ ಬಳಸುವುದು ವಾಡಿಕೆ. ನಿಮ್ಮ ಇ-ಪುಸ್ತಕವು ಉಚಿತವಿದ್ದಲ್ಲಿ ೦ - ಸೊನ್ನೆ ಎಂದು ನಮೂದಿಸಬಹುದು. ಭಾರತೀಯ ಸೈಟಿನಲ್ಲಿ ರುಪಾಯಿಯಲ್ಲೇ ಸೂಚಿಸಬಹುದು.

೭. ಚೆಕ್ ಪ್ರಿವ್ಯೂ / ಫೈನಲ್: ಈ ಸಂಧರ್ಭದಲ್ಲಿ ಅವರು ನಿಮಗೆ ಒಮ್ಮೆ ಅವರೇ ನಿಮ್ಮ ಪುಟ ತುಂಬಿದ ನಂತರ 'ಚೆಕ್ ಮಾಡಿ ಪ್ರಿವ್ಯು ಮಾಡಿ ಒಪ್ಪಿ' ಎಂದು ಸೂಚಿಸುತ್ತಾರೆ. ನೀವು ಆಗ ನಿಮ್ಮ ಪುಸ್ತಕವನ್ನು ಡೌನ್ ಲೋಡ್ ಮಾಡಿಕೊಂಡು ನಿಮ್ಮ ಪ್ರಕಾರ ಎಲ್ಲಾ ಸರಿಯಿದೆಯೆ ಎಂದು ತಾಳ್ಮೆಯಿಂದ ತಾಳೆಮಾಡಿ ಓಕೇ ಮಾಡಬೇಕು.

೮. ನಂತರ ಅವರು ತಮ್ಮ ಕಡೆಯಿಂದ ಪರಿಶೀಲಿಸಲು ಸ್ವೀಕರಿಸುತ್ತಾರೆ.

smashwords ತರಹ ಸೈಟಿನಲ್ಲಿ ಬಹಳ ಎಚ್ಚರಿಕೆಯಿಂದ ನಿಮ್ಮ ಪುಸ್ತಕವನ್ನು ಪರೀಕ್ಷಿಸಿ ಅವರ ಅಂತರರಾಷ್ಟ್ರೀಯ ಗುಣಮಟ್ಟ ನಿಯಮದ ಪ್ರಕಾರ ಹೇಳಿದಂತೆ ಮಾಡಿದ್ದೇವೋ ಇಲ್ಲವೊ ಎಂದು ಪರೀಕ್ಷಿಸುತ್ತಾರೆ. ಅವರ ಮೌಲ್ಯಮಾಪನದಲ್ಲಿ ಪ್ರಕಟನೆಯಲ್ಲಿ ತಪ್ಪು/ ದೋಷಗಳೇನಾದರೂ ಹೊರಬಂದಾವೋ ಎಂದು ನೀವು ಒಂದೆರಡು ದಿನದ ನಂತರ ನಿಮ್ಮ ಖಾತೆ ಪುಟಕ್ಕೆ ಹೋಗಿ ನೋಡಬೇಕು. ಅವನ್ನು ಪಟ್ಟಿ ಮಾಡಿ ಸರಿಪಡಿಸಲು ಸೂಚಿಸುತ್ತಾರೆ. ಮುಕ್ಕಲುವಾಸಿ ಕವರ್

ಚಿತ್ರದ ಉದ್ದಳತೆ, text formatting error, copyright/ disclaimer missing, no English caption on cover ಇತ್ಯಾದಿ ತಪ್ಪುಗಳು ಬರುವುದು ಹೆಚ್ಚು. ನೀವು ನಿಮ್ಮ ಕರಡು ಪ್ರತಿಯನ್ನು ಆ ಪ್ರಕಾರ ತಿದ್ದಿ ಮತ್ತೆ ಅಪ್ ಲೋಡ್ ಮಾಡಿ ಅವರ ಒಪ್ಪಿಗೆಗೆ ಕಾಯಬೇಕು.

೯. ಎಲ್ಲಾ ಸರಿಯಾಗಿದ್ದಲ್ಲಿ ನಿಮ್ಮ ಪುಸ್ತಕ ಒಪ್ಪಿ, ಪ್ರಕಟಿಸಿದ್ದೇವೆ ಎಂದು ಅಲ್ಲೇ ತಮ್ಮ ನಿರ್ಧಾರ ತಿಳಿಸುತ್ತಾರೆ, ನಿಮ್ಮ ಇ ಮೈಲಿಗೂ ಖಚಿತಪಡಿಸಿ ಬರೆದು ಕಳಿಸುತ್ತಾರೆ.


ಅಲ್ಲಿಗೆ ನಿಮ್ಮ ಪುಸ್ತಕ ಪ್ರಕಟವಾಗಿ ಅವರ ಆನ್ ಲೈನ್ ಮಳಿಗೆಯಲ್ಲಿ ಮಾರಾಟಕ್ಕೆ ಸಿಗುತ್ತದೆ. ಆ ಪುಟದ ಕೊಂಡಿಯನ್ನು ಕೊಟ್ಟು ನೀವು ನಿಮ್ಮ ಓದುಗರಿಗೆ ತಿಳಿಸಿ ಪ್ರಚಾರ ಮಾಡಬಹುದು. (ಇದುವರೆಗೂ ಆ ಪುಟ ಬೇರೆ ಯಾರಿಗೂ ಕಾಣಿಸಿರುವುದಿಲ್ಲ, ನೀವು ಲೇಖಕರಾದವರು ಮಾತ್ರ ಅದನ್ನು ನೋಡಿರುತ್ತೀರಿ!)

ಒಂದು ಸೈಟಿನಲ್ಲಿ ಪ್ರಕಟ ಮಾಡಿದರೆ ಅವರೇ ವಿಶ್ವಾದ್ಯಂತ ತಮ್ಮ ಸಂಪರ್ಕವಿರುವ ಬಹುತೇಕ ಜನಪ್ರಿಯ ಆನ್ ಲೈನ್ ಪುಸ್ತಕದಂಗಡಿಗಳಿಗೂ ಹಂಚುತ್ತಾರೆ.. ಆದರೆ ಕನ್ನಡಕ್ಕೆ amazon, barnes&Noble ಮುಂತಾದ ಪ್ರಕಾಶಕ ಸಂಸ್ಥೆಗಳ ತಡೆ ಇದೆ. ( ಇನ್ನೂ ಅವರಲ್ಲಿ ಕನ್ನಡ ಭಾಷೆಗೆ ಇನ್ನೂ ತಕ್ಕ ಬೆಂಬಲಿತ ತಂತ್ರಾಂಶ ಇಲ್ಲ)


೯. PDF ಪುಸ್ತಕಗಳ ಬಗ್ಗೆ:

ಹಲವು ವೆಬ್ ಸೈಟ್ ಗಳು ಜನಪ್ರಿಯ ಫೈಲ್ ಬಗೆಯಾದ PDF ಅನ್ನು ಮೂಲ ವರ್ಡ್ ಫೈಲಿಂದ ಸಮರ್ಪಕವಾಗಿ ಬದಲಿಸುವುದಿಲ್ಲ.. ಅದು ದೋಷಪೂರಿತವಾಗಿರುತ್ತದೆ. ಆದರೆ ನೀವೆ PDF ಫೈಲ್ ಆಗಿ ಬದಲಿಸುವುದಾದರೆ ವರ್ಡ್ ಫೈಲಿನಲ್ಲಿ ನಿಮ್ಮ ಲಿಪಿ ಫಾಂಟುಗಳನ್ನು ಅಚ್ಚು ( Embed) ಮಾಡಿ ಕಳಿಸಿಕೊಡಬೇಕಾಗುತ್ತದೆ.

**Pothi.com ಮತ್ತು Instamojo.com ವೆಬ್ ತಾಣಗಳಲ್ಲಿ PDF ಮಾಡಿಯೇ ಇ-ಪುಸ್ತಕ ಮಾರಬಹುದು**




## INSTAMOJO




ಆದರೆ ಈ ಮೇಲಿನ PDF ಫೈಲುಗಳನ್ನು ಕೊಂಡವರು ಬೇರೆಯವರಿಗೆ ಹಂಚಬಹುದು, ಮಾರಬಹುದು, ಈ ಪೈರೆಸಿ ಹಾವಳಿಯನ್ನು ತಡೆಯಲು ಮೊಬೈಲ್ ಸಾಧನ ಪ್ರಕಾಶಕರು ಸಜ್ಜಾಗಿದ್ದಾರೆ

ಇನ್ನೊಂದು ಪರಿಹಾರವೆಂದರೆ: ನಿಮ್ಮ ಇ ಪುಸ್ತಕವನ್ನು EPUB ಆಗಿ ಖರೀದಿ ಮಾಡಿ Calibre, Chrome Readium. Firefox EPUB reader ಮೂಲಕ ಸುಲಭವಾಗಿ ಓದಿಕೊಳ್ಳಬಹುದು. ಇಲ್ಲವೇ ಅದನ್ನು ನೀವೇ CALIBRE > File convert ಗೆ ಹೋಗಿ ಉಚಿತವಾಗಿ PDF ಗೆ ಬದಲಿಸಿಕೊಳ್ಳಬಹುದು. ಇನ್ನು ಕೆಲವು ವೆಬ್ ಸೈಟುಗಳಲ್ಲಿ text./ html ಫೈಲ್ ಕೂಡಾ ಕೊಡುತ್ತಾರೆ. ( ಕ್ಯಾಲಿಬರ್ ಬೇಕಿದ್ದರೆ:https://calibre-ebook.com/download ).

ಭಾರತೀಯ ಸೈಟ್(dailyhunt, pustaka, kaibooks ಇತ್ಯಾದಿ) ಗಳಲ್ಲಿ  ನಿಮ್ಮ ಮೊಬೈಲ್ ಸಾಧನಗಳಿಗೆ ಇಳಿಸಿಕೊಳ್ಳಬಹುದಾದ ಇ-ಪುಸ್ತಕಗಳನ್ನೆ ತಮ್ಮ ಆಪ್‌ಗಳಲ್ಲಿ ಮಾರುತ್ತಾರೆ. ಅದನ್ನು ಯಾರೂ ಕಾಪಿ ಮಾಡಿ ಹಂಚಲಾಗದು.

ಇದಕ್ಕಿಂತಾ ಹೆಚ್ಚು ಮಾಹಿತಿ ಆಯಾ ವೆಬ್ ತಾಣಗಳಲ್ಲಿಯೆ ಸಿಗುತ್ತದೆ. ಹಲವು ಅಂತರ್ಜಾಲ ಲೇಖನಗಳು ಲಭ್ಯವಿವೆ.

ಒಟ್ಟಾರೆ ಹೇಳುವುದಾದರೆ:  *. ಒಂದು ಇಬುಕ್ ರೀಡರ್/ ಕಿಂಡಲ್ ಅಥವಾ ಟ್ಯಾಬ್ಲೆಟ್ಟಿನಲ್ಲಿ ಇಡೀ ಲೈಬ್ರರಿಯನ್ನೇ ಇಟ್ಟುಕೊಂಡು ಓಡಾಡಬಹುದು! ಇಂಗ್ಲೀಶಿನಲ್ಲಂತೂ ಇ-ಬುಕ್ ಗಳ ಭರಾಟೆ ಜೋರಾಗಿದೆ. ಈಗ ಕನ್ನಡವೂ ಈ ಇ-ಓಟದಲ್ಲಿ ಭಗವಹಿಸಲು ಸಕಾಲವಾಗಿದೆ   ಜಾಗದ ಕೊರತೆ, ಸಂಗ್ರಹದ ಅನುಕೂಲ, ಬೇಕಾದಲ್ಲಿ ತೆಗೆದುಕೊಂಡು ಹೋಗಲು ಸುಲಭ ಹೀಗೆ ವಿವಿಧ ಕಾರಣಗಳಿಗೆ ಇ-ಬುಕ್ ಬಳಕೆ ಸಕಾರಣವಾಗಿಯೇ ಹೆಚ್ಚಾಗುತ್ತಿದೆ.*

*ಭವಿಷ್ಯದ ಓದುಗ ಹೆಚ್ಚೆಚ್ಚು  ಮೊಬೈಲ್ ಮತ್ತು ಗಣಕ ಸಾಧನದಲ್ಲೇ ವ್ಯವಹರಿಸುವ ಸಾಧ್ಯತೆಯಿರುವುದರಿಂದ ಇ-ಪುಸ್ತಕಗಳು ಪ್ರಕಾಶಕ ಲೋಕದಲ್ಲಿ ದಾಪುಗಾಲು ಹಾಕುತ್ತಾ ನೆದೆದಿವೆ ಎಂಬುದರಲ್ಲಿ ಸಂದೇಹವಿಲ್ಲ.*

*ತಮ್ಮ ಹೆಚ್ಚಿನ ಓದಿಗಾಗಿ ಈ ತಾಣಗಳಿಗೆ ಭೇಟಿ ಕೊಡಬಹುದು*:

೧. http://vikasavada.blogspot.in/2015/01/kannada-ebooks.html